**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 7 ನೇ ಆಗಸ್ಟ್ 2025**

**ಅಸಲು ದಾವೆ ಸಂಖ್ಯೆಃ 49/2019**

**ವಾದಿ -**

ಎನ್.ಪಿ. ವೀರಭದ್ರಪ್ಪ

**ವಿರುದ್ಧ**

**ಪ್ರತಿವಾದಿಗಳು -**

ಎನ್.ಪಿ ಚಂದ್ರಶೇಖರಪ್ಪ ಮೃತಪಟ್ಟಿದ್ದು ಅವನ
ವಾರಸುದಾರರು 1(ಎ) ಹೆಚ್ ಶಿವಲೀಲ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ-7**

**ಅರ್ಜಿದಾರ / 1(ಎ) ನೇ ಪ್ರತಿವಾದಿ**

ಶ್ರೀಮತಿ ಹೆಚ್. ಶಿವಲೀಲಾ ಗಂಡ ಎನ್.ಪಿ ಚಂದ್ರಶೇಖರಪ್ಪ,
ವಯಸ್ಸು ಸುಮಾರು 63 ವರ್ಷ,
ಮನೆಗೆಲಸ,
ವಾಸಃ ಗುಡ್ಡದ ನೇರಳಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು.

**(ಅರ್ಜಿದಾರಳ ಪರ ವಕೀಲರು - ಶ್ರೀ ಸಿ. ಬಸವರಾಜು)**

**ವಿರುದ್ಧ**

**ಎದುರುದಾರರು/ ವಾದಿ**

ಎನ್.ಪಿ. ವೀರಭದ್ರಪ್ಪ ತಂದೆ ಎನ್.ಸಿ. ಪರಪ್ಪ,
ವಯಸ್ಸು ಸುಮಾರು 67 ವರ್ಷ,,

ವ್ಯವಸಾಯ,
ವಾಸಃ ಗುಡ್ಡದನೇರಳಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**(ಎದುರುದಾರರ ಪರ ವಕೀಲರು - ಶ್ರೀ ಎಂ.ಎಸ್.ಸದ್ಯೋಜಾತ)**

**ಮಧ್ಯಂತರ ಅರ್ಜಿ ಸಂಖ್ಯೆ 7 ರ ಮೇಲೆ ಆದೇಶ**

ಅರ್ಜಿದಾರ/1(ಎ)ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿ ಸಂಖ್ಯೆ 7 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿ, ವಾದಪತ್ರದ ತಪಶೀಲಿನ ತಿದ್ದುಪಡಿ ಮಾಡಲು ಅನುಮತಿಸಬೇಕೆಂದು ಕೋರಿರುತ್ತಾಳೆ.

**2.** ಈ ಮಧ್ಯಂತರ ಅರ್ಜಿಯನ್ನು 1(ಎ)ನೇ ಪ್ರತಿವಾದಿ ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾಳೆ.

**3.** ಎದುರುದಾರ/ವಾದಿ ಈ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

**4.** ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರ/1(ಎ)ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ವಾದಪತ್ರದ ತಪಶೀಲನ್ನು

ತಿದ್ದುಪಡಿ ಮಾಡಲು ಅನುಮತಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾಳೆಯೇ?

ಅಂಶ- 2- ಯಾವ ಆದೇಶ?

**6.** ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ನಕಾರಾತ್ಮಕವಾಗಿ ಮತ್ತು,

ಅಂಶ-2 - ಅಂತಿಮ ಆದೇಶದಂತೆಃ

**ಕಾರಣಗಳು**

**7. ಅಂಶ-1 –** ವಾದಿ ತನ್ನ ವಾದ ಪತ್ರದಲ್ಲಿ, ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳಲ್ಲಿ ತನಗೆ ¼ ಭಾಗ ಮತ್ತು ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು ಕೋರಿರುತ್ತಾನೆ. ಆದರೆ, 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳನ್ನು ದಿನಾಂಕಃ 28-07-1983 ರ ನೊಂದಣಿಯಾಗದೇ ಇರುವ ಪಾಲುವಿಭಾಗ ಪತ್ರದ ಮೂಲಕ ಪಡೆದುಕೊಂಡಿರುವುದರಿಂದ ವಾದಿಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕು ಇರುವುದಿಲ್ಲ ಮತ್ತು ವಾದಿ ಯಾವುದೇ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹನಲ್ಲವೆಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ. ಈಗ 1 ನೇ ಪ್ರತಿವಾದಿ ಮೃತಪಟ್ಟಿದ್ದರಿಂದ ಅವನ ವಾರಸುದಾರಳಾದ ಅರ್ಜಿದಾರಳು/1(ಎ)ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿದ್ದು, ಈಗ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ವಾದಪತ್ರದ ತಪಶೀಲನ್ನು ತಿದ್ದುಪಡಿ ಮಾಡಲು ಅನುಮತಿಸಬೇಕೆಂದು

ಕೋರಿರುತ್ತಾಳೆ.

**8.** ಅರ್ಜಿದಾರ / 1 ನೇ ಪ್ರತಿವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿ ಮತ್ತು ಪ್ರತಿವಾದಿಗಳು ದಾವಾ ಆಸ್ತಿಗಳನ್ನು ದಿನಾಂಕಃ 28-07-1987 ರಲ್ಲಿ ನೊಂದಣಿಯಾಗದೇ ಇರುವ ಪಾಲುವಿಭಾಗ ಪತ್ರದ ಮೂಲಕ, ಭಾಗವನ್ನು ಮಾಡಿಕೊಂಡಿದ್ದು, ಅದರಂತೆ ವಾದಿ ಮತ್ತು ಪ್ರತಿವಾದಿಗಳು ತಮ್ಮ ಹಿಸ್ಸೆಯನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆ. ಸದರಿ ಪಾಲು ವಿಭಾಗವಾದ ನಂತರ 1 ನೇ ಪ್ರತಿವಾದಿ ದಾವಾ 8 ಮತ್ತು 9 ನೇ ಆಸ್ತಿಗಳನ್ನು ಬಿ.ಎಂ.ಶಾಂತ ಗಂಡ ಎ.ಎಂ.ಶಿವಸ್ವಾಮಿ ಇವರಿಂದ ದಿನಾಂಕಃ 20-04-2009 ರಂದು ಖರೀದಿಸಿದ್ದು, ದಾವಾ 13 ನೇ ಆಸ್ತಿಯು ಸ್ವಯಾರ್ಜಿತವಾದ ಆಸ್ತಿಗಳಾಗಿರುವುದರಿಂದ ವಾದಿ ಮತ್ತು 2 ರಿಂದ 4 ನೇ ಪ್ರತಿವಾದಿಗಳಿಗೆ ಸದರಿ ಆಸ್ತಿಗಳ ಮೇಲೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ. ಆದ್ದರಿಂದ, ವಾದಪತ್ರವನ್ನು ತಿದ್ದುಪಡಿಗೆ ಅನುಮತಿಸಬೇಕು. ವಾದಪತ್ರ ತಿದ್ದುಪಡೆಯಿಂದ ದಾವಾ ಕಾರಣ ಹಾಗೂ ದಾವೆಯ ಸ್ವರೂಪ ಬದಲಾವಣೆಗೊಳ್ಳುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ, ಅರ್ಜಿದಾರಳಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**9.** ಎದುರುದಾರ/ ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, 1(ಎ) ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿರುವ ತನ್ನ ಪ್ರಮಾಣಪತ್ರದಲ್ಲಿ ಸುಳ್ಳು ಅಂಶಗಳನ್ನು ಹೇಳಿರುತ್ತಾಳೆ. ಪಾಲುವಿಭಾಗ ಆಗಿರುವುದನ್ನು ಉಭಯಪಕ್ಷಗಾರರು ತಮ್ಮ ಸಾಕ್ಷಿಯ ಮೂಲಕ ಸಾಭೀತುಪಡಿಸಬೇಕು, ಅದಕ್ಕೆ ಸಂಪೂರ್ಣ ಸಾಕ್ಷಿ ವಿಚಾರಣೆ ಅವಶ್ಯವಿರುತ್ತದೆ ಮತ್ತು ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು

ಸಾಕಷ್ಟು ಕಾರಣಗಳನ್ನು ಅರ್ಜಿದಾರಳು ತೋರಿಸಿಲ್ಲ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**10.** ವಾದಿ ತನ್ನ ವಾದ ಪತ್ರದಲ್ಲಿ, ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳೆಂದು ಆರೋಪಿಸಿರುತ್ತಾನೆ. ಆದರೆ, 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ, ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳನ್ನು ದಿನಾಂಕಃ 28-07-1983 ರ ನೊಂದಣಿಯಾಗದೇ ಇರುಮ ಪಾಲುವಿಭಾಗ ಪತ್ರದ ಮೂಲಕ ಪಡೆದುಕೊಂಡಿರುವುದರಿಂದ ವಾದಿಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕು ಇರುವುದಿಲ್ಲ ಮತ್ತು ವಾದಿ ಯಾವುದೇ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹನಲ್ಲವೆಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದರಿಂದ, ಈ ದಾವೆಯಲ್ಲಿ ಉಭಯಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಪ್ರಶ್ನೆಗಳೆಂದರೆ ದಾವಾ ಆಸ್ತಿಗಳು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳೋ ಅಥವಾ 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಹೇಳಿದಂತೆ ದಿನಾಂಕಃ 28-07-1983 ರಲ್ಲಿ ಪಾಲುವಿಭಾಗವಾಗಿ ಅದರಂತೆ, ತಮ್ಮ ಹಿಸ್ಸೆಯ ಪ್ರತ್ಯೇಕ ಸ್ವಾಧೀನ ಹೊಂದಿರುತ್ತಾರೋ ಅಥವಾ ಇಲ್ಲ ಎನ್ನುವುದಾಗಿದ್ದು, ಆದರೆ ಅರ್ಜಿದಾರಳು/ 1(ಎ)ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ವಾದಪತ್ರದ ತಪಶೀಲನ್ನು ತಿದ್ದುಪಡಿಗೆ ಅನುಮತಿಸಬೇಕೆಂದು ಕೋರಿರುತ್ತಾಳೆ. ಆದರೆ, ಅರ್ಜಿದಾರಳು ವಾದಿ ಅಲ್ಲ ಮತ್ತು ವಾದಪತ್ರ ಅರ್ಜಿದಾರಳಿಗೆ ಸಂಬಂಧವಿಲ್ಲ. ಅಲ್ಲದೆ ಅರ್ಜಿದಾರಳು ಒಂದು ವೇಳೆ ತಿದ್ದುಪಡಿಗೆ ಕೇಳುವುದಿದ್ದರೆ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ತನ್ನ ಲಿಖಿತ ಹೇಳಿಕೆ ತಿದ್ದುಪಡಿಗೆ ಕೇಳಬಹುದು ವಿನಃ ವಾದಿಯ ವಾದಪತ್ರದ ತಿದ್ದುಪಡಿಗೆ ಕೇಳಲು ಬರುವುದಿಲ್ಲ. ಆದ್ದರಿಂದ, ಅರ್ಜಿದಾರಳು/ 1(ಎ)ನೇ ಪ್ರತಿವಾದಿ

ಈ ಮಧ್ಯಂತರ ಅರ್ಜಿಯಲ್ಲಿ ಕೋರಿದಂತೆ ವಾದಪತ್ರದ ತಿದ್ದುಪಡಿಗೆ ಅನುಮತಿಸಲು ಬರುವುದಿಲ್ಲ. ಅಲ್ಲದೆ, ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದಲೂ ಸಹ ಈ ಮಧ್ಯಂತರ ಅರ್ಜಿ ಪುರಸ್ಕರಿಸುವಂತಹದು ಅಲ್ಲ. ಕಾರಣ, ಅರ್ಜಿದಾರಳು / 1(ಎ) ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯಲ್ಲಿ ಕೋರಿದಂತೆ ವಾದಪತ್ರದ ತಿದ್ದುಪಡಿಗೆ ಅನುಮತಿಸಲು ಇರುವಂತಹ ಕಾರಣಗಳನ್ನು ತೋರಿಸಿರುವುದಿಲ್ಲ. ಆದ್ದರಿಂದ, **ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**11.** **ಅಂಶ-2** – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದೆ:

**ಆದೇಶ**

ಅರ್ಜಿದಾರಳು/1(ಎ)ನೇ ಪ್ರತಿವಾದಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ-7 ನ್ನು 200/- ರೂಗಳ ಖರ್ಚಿನ ಮೇಲೆ ವಜಾಗೊಳಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ **7 ನೇ ಆಗಸ್ಟ್ 2025** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ವೈ. ಕೆ. ಬೇನಾಳ),**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹೊಸದುರ್ಗ.**